
# ಅಧ್ಯಾಯ II
# ಹಣಕಾಸು ನಿರ್ವಹಣೆ



2017–18ರಿಂದ ಕಾಮಗಾರಿ ವಹಿಸುವ ಸಂಸ್ಥೆಗಳಿಂದ ಸ್ವೀಕರಿಸಲಾದ ₹303.76 ಕೋಟಿ ಮೌಲ್ಯದ ಕಾಮಗಾರಿಗಳಿಗೆ ಅಗತ್ಯವಾಗಿದ್ದ ವರ್ಕ್ ಕೋಡ್ ನೀಡಲಾಗಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿದೆ. ಕಾಮಗಾರಿ ವಹಿಸುವ ಸಂಸ್ಥೆಗಳಿಂದ ಹಣ ಬಿಡುಗಡೆಗೆ ಮುನ್ನವೇ ಕಾಮಗಾರಿಗಳನ್ನು ಆರಂಭಿಸಿರುವುದು ಮತ್ತು ಕಾಮಗಾರಿ ವಹಿಸುವ ಸಂಸ್ಥೆಗಳು ಹಣ ಬಿಡುಗಡೆ ಮಾಡಿದ್ದಕ್ಕಿಂತ ಹೆಚ್ಚು ವೆಚ್ಚ ಮಾಡುತ್ತಿರುವ ಸಂದರ್ಭಗಳನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ.

ಇದಲ್ಲದೆ, 15 ಕಾಮಗಾರಿಗಳಲ್ಲಿ ವೆಚ್ಚವು ಅಂದಾಜು ವೆಚ್ಚಕ್ಕಿಂತ ₹3.82 ಕೋಟಿಗಳಷ್ಟು ಹೆಚ್ಚಾದರೂ ಮತ್ತು 439 ಕಾಮಗಾರಿಗಳಿಗೆ ಸಂಬಂಧಿಸಿದಂತೆ ₹54.39 ಕೋಟಿ ಹಣ ಸ್ವೀಕೃತವಾಗಬೇಕಿದ್ದರೂ ಕೆಆರ್‌ಐಡಿಎಲ್ ಕಾಮಗಾರಿ ವಹಿಸುವ ಸಂಸ್ಥೆಗಳಿಂದ ಬಾಕಿ ಹಣವನ್ನು ತ್ವರಿತವಾಗಿ ಪಡೆಯಲು ವಿಫಲವಾಗಿದೆ. ಕಾಮಗಾರಿ ವಹಿಸುವ ಸಂಸ್ಥೆಗಳಿಂದ ಬಳಕೆಗಾಗಿ ಕೆಆರ್‌ಐಡಿಎಲ್ ಪಡೆದ ಹಣದಲ್ಲಿ ಶೇಕಡ 33ರಷ್ಟು ಬಳಕೆಯಾಗದ ಉಳಿಕೆಯಿದ್ದಿತು. ಕೆಆರ್‌ಐಡಿಎಲ್‌ನ ಸಾಧನೆಯ ಕೊರತೆಯಿಂದಾಗಿ ಕ್ರೋಢೀಕರಣ ಮುಂಗಡವಾಗಿ ಪಡೆದ ಹಣದಲ್ಲಿ ₹389.90 ಕೋಟಿಗಳಷ್ಟು ಮೊತ್ತವು ಇತ್ಯರ್ಥವಾಗದೆ ಉಳಿದಿತ್ತು.

ಗುರುತಿಸಲಾಗದ ಅಂತಿಮ ಲೆಕ್ಕ ಶೀರ್ಷಿಕೆಗಳ ವಹಿವಾಟುಗಳ ಲೆಕ್ಕ ಇಡುವ ಅಮಾನತ್ತು ಖಾತೆಯ ಶಿಲ್ಕು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇತ್ತು. ಗ್ರೂಪ್ ಲೀಡರ್‌ಗಳ ಕಾಮಗಾರಿ ಬಿಲ್‌ಗಳಿಂದ ₹4.81 ಕೋಟಿಯಷ್ಟು ಶಾಸನಬದ್ಧ ರಾಯಧನ ಕಠಾವಣೆ ಮಾಡಲು ಕೆಆರ್‌ಐಡಿಎಲ್ ವಿಫಲವಾಗಿದೆ.

ಕಾಮಗಾರಿವಾರು ದಾಖಲೆಗಳ ನಿರ್ವಹಣೆ ಮಾಡದಿರುವುದು, ವರ್ಕ್ ಕೋಡ್ ನೀಡದಿರುವುದು, ಕಾಮಗಾರಿ ವಹಿಸುವ ಸಂಸ್ಥೆಗಳಿಂದ ಬಿಡುಗಡೆಯಾದ ಹಣಕ್ಕೆ ಮೀರಿದ ಖರ್ಚು, ಯೋಜನೆಗಳ ಹಣದ ಮೇಲೆ ಗಳಿಸಿದ ಬಡ್ಡಿಯ ಜಮೆಯ ಬಗೆಗಿನ ಸರ್ಕಾರದ ಆದೇಶಗಳನ್ನು ಅನುಸರಿಸದಿರುವುದು ಮತ್ತು ಇತ್ಯರ್ಥವಾಗದ ಕ್ರೋಢೀಕರಣ ಮುಂಗಡಗಳು ಮತ್ತು ಅಮಾನತ್ತು ಖಾತೆಗಳು ಕಾರಣದಿಂದಾಗಿ ಕೆಆರ್‌ಐಡಿಎಲ್‌ನ ಆರ್ಥಿಕ ನಿರ್ವಹಣೆ ದುರ್ಬಲವಾಗಿತ್ತು.

ಕಾಮಗಾರಿ ವಹಿಸುವ ಸಂಸ್ಥೆಗಳಿಂದ ಕೆಆರ್‌ಐಡಿಎಲ್‌ನ ಕೇಂದ್ರ ಕಛೇರಿಗೆ ಮತ್ತು ಕೇಂದ್ರ ಕಛೇರಿಯಿಂದ ಉಪ–ವಿಭಾಗಗಳಿಗೆ ಅಂತಿಮ ಖಾತೆಗಳ ಸಲ್ಲಿಕೆಯಾಗುವವರೆಗಿನ ಹಣದ ಹರಿವಿನ ಪ್ರಕ್ರಿಯೆಯನ್ನು ಕೆಳಗಿನ **ನಕ್ಷೆ 2.1**ರಲ್ಲಿ ತೋರಿಸಲಾಗಿದೆ.

**ನಕ್ಷೆ 2.1: ಹಣದ ಹರಿವಿನ ಪ್ರಕ್ರಿಯೆ** ಆಧಾರ: ಕೆಆರ್‌ಐಡಿಎಲ್ ಒದಗಿಸಿದ ಮಾಹಿತಿ



## 2.1 ಹಣದ ಸ್ವೀಕೃತಿ ಮತ್ತು ಬಳಕೆ/ಭೌತಿಕ ಮತ್ತು ಆರ್ಥಿಕ ಪ್ರಗತಿ

2016–17 ರಿಂದ 2020–21ರವರೆಗೆ ಕೆಆರ್‌ಐಡಿಎಲ್‌ನ ಲೆಕ್ಕಪರಿಶೋಧಿತ ವಾರ್ಷಿಕ ಲೆಕ್ಕಪತ್ರಗಳ ಅನುಸಾರ ಸ್ವೀಕರಿಸಿದ, ಬಳಸಿದ ಮತ್ತು ಕಾರ್ಯಗತಗೊಳಿಸಿದ ಕಾಮಗಾರಿಗಳಿಗೆ ಸರಿಹೊಂದಿಸಲಾದ ಹಣದ ವಿವರಗಳನ್ನು ಕೆಳಗಿನ **ಕೋಷ್ಟಕ 2.1**ರಲ್ಲಿ ನೀಡಲಾಗಿದೆ:

**ಕೋಷ್ಟಕ 2.1: ಭೌತಿಕ ಮತ್ತು ಆರ್ಥಿಕ ಪ್ರಗತಿಯಲ್ಲಿನ ಪ್ರವೃತ್ತಿಗಳು**

(₹ ಕೋಟಿಗಳಲ್ಲಿ)

| ವರ್ಷ | ವಹಿಸಿದ ಒಟ್ಟು ಕಾಮಗಾರಿಗಳ ಸಂಖ್ಯೆ | ಪೂರ್ಣಗೊಳಿಸಿದ ಒಟ್ಟು ಕಾಮಗಾರಿಗಳ ಸಂಖ್ಯೆ | ಪೂರ್ಣಗೊಳಿಸಿದ ಕಾಮಗಾರಿಗಳ ಶೇಕಡಾವಾರು | ವರ್ಷದಲ್ಲಿ ಸ್ವೀಕರಿಸಿದ ಹಣ | ಲಭ್ಯವಿದ್ದ ಒಟ್ಟು ಹಣ (ಎ + ಹಿಂದಿನ ವರ್ಷದ ಅಂತಿಮ ಶಿಲ್ಕು (ಡಿ)) | ವರ್ಷದಲ್ಲಿ ಸರಿಹೊಂದಿಸಲಾದ ಹಣ | ಲಭ್ಯವಿದ್ದ ಶಿಲ್ಕು (ಬಿ–ಸಿ) |
|---|---|---|---|---|---|---|---|
| | | | | (ಎ) | (ಬಿ) | (ಸಿ) | (ಡಿ) |
| 2016–17 | 12802 | 4967 | 38.79 | 2,604.14 | *7,816.15 | 1,068.05 | 6,748.10 |
| 2017–18 | 19384 | 5250 | 27.08 | 3,640.98 | 10,389.08 | 1,247.79 | 9,141.29 |
| 2018–19 | 24963 | 6169 | 24.71 | 3,590.21 | 12,731.50 | 1,679.74 | 11,051.76 |
| 2019–20 | 17893 | 6296 | 35.18 | 4,610.35 | 15,662.11 | 1,346.68 | 14,315.43 |
| 2020–21 | 9532 | 1332 | 13.97 | 3,357.75 | 17,673.18 | 352.88 | 17,320.30 |

ಆಧಾರ: ಕೆಆರ್‌ಐಡಿಎಲ್ ಒದಗಿಸಿದ ಮಾಹಿತಿಯ ಆಧಾರದ ಮೇಲೆ ಲೆಕ್ಕಪರಿಶೋಧನೆಯು ಸಂಕಲಿಸಿರುವುದು

* ₹5212.01 ಕೋಟಿ ಆರಂಭಿಕ ಬಾಕಿ ಒಳಗೊಂಡಿದೆ

2016–17 ರಿಂದ 2020–21ರವರೆಗಿನ ಅವಧಿಯಲ್ಲಿ ನಿಧಿಯ ಸಂಗ್ರಹವು ಸ್ಥಿರವಾಗಿ ಹೆಚ್ಚುತ್ತಾ ₹6,748.10 ಕೋಟಿಯಿಂದ ₹17,320.30 ಕೋಟಿಗೆ ಏರಿಕೆಯಾಗಿದೆ.

ಈ ಅವಧಿಯಲ್ಲಿ ಕಾರ್ಯಗತ ಮಾಡಿದ ಕಾಮಗಾರಿಗಳಿಗೆ ಸರಿಹೊಂದಿಸಲಾದ ಹಣವು ₹352.88 ಕೋಟಿಯಿಂದ ₹1,679.74 ಕೋಟಿ ವ್ಯಾಪ್ತಿಯಲ್ಲಿತ್ತು. ಹಣ ಲಭ್ಯವಿದ್ದರೂ, ಕಂಡಿಕೆ 4.2ರಲ್ಲಿ ಚರ್ಚಿಸಿರುವಂತೆ, ಲೆಕ್ಕಪರಿಶೋಧನಾ ಅವಧಿಯಲ್ಲಿ ಶೇಕಡಾ 28ರಷ್ಟು (84,574ರಲ್ಲಿ 24,014) ಕಾಮಗಾರಿಗಳನ್ನು ಮಾತ್ರ ಪೂರ್ಣಗೊಳಿಸಲಾಗಿದೆ.

ಹಣಕಾಸು ನಿರ್ವಹಣೆಗೆ ಸಂಬಂಧಿಸಿದ ಲೆಕ್ಕಪರಿಶೋಧನಾ ಅವಲೋಕನಗಳನ್ನು ಈ ಕೆಳಗೆ ಚರ್ಚಿಸಲಾಗಿದೆ:

### *2.1.1 ಕೆಆರ್‌ಐಡಿಎಲ್ ಸ್ವೀಕರಿಸಿದ ಕ್ರೋಢೀಕರಣ ಮುಂಗಡಗಳನ್ನು ಇತ್ಯರ್ಥಗೊಳಿಸದಿರುವುದು – ₹389.90 ಕೋಟಿ*

ಕರ್ನಾಟಕ ಲೋಕೋಪಯೋಗಿ ಇಲಾಖಾ ಸಂಹಿತೆಯ ಕಂಡಿಕೆ 200ರ ಪ್ರಕಾರ, ಗುತ್ತಿಗೆ ಒಪ್ಪಂದದ ಮೌಲ್ಯದ ಶೇಕಡಾ ಐದಕ್ಕಿಂತ ಹೆಚ್ಚಿಲ್ಲದ ಕ್ರೋಢೀಕರಣ ಮುಂಗಡವನ್ನು ಗುತ್ತಿಗೆದಾರನಿಗೆ ಬ್ಯಾಂಕ್ ಗ್ಯಾರಂಟಿ ಸಲ್ಲಿಕೆಯ ಷರತ್ತಿಗೆ ಒಳಪಟ್ಟು ಮತ್ತು ಕಾರ್ಯಾದೇಶ ನೀಡಿದ ಹದಿನೈದು ದಿನಗಳ ಒಳಗೆ ಬಿಡುಗಡೆ

ಮಾಡಬೇಕು. ಕಾಮಗಾರಿಯು ಶೇಕಡಾ 15 ಅಥವಾ ಅದಕ್ಕಿಂತ ಹೆಚ್ಚು ಪ್ರಗತಿಯಾದ ನಂತರ ಚಾಲ್ತಿ ಕಾಮಗಾರಿ ಬಿಲ್‌ಗಳಿಂದ ಕ್ರೋಢೀಕರಣ ಮುಂಗಡವನ್ನು ಸರಿಹೊಂದಿಸಬೇಕು.

2020–21ರ ಅಂತ್ಯಕ್ಕೆ ಕೆಆರ್‌ಐಡಿಎಲ್‌ನ ಇತ್ಯರ್ಥವಾಗದ ಕ್ರೋಢೀಕರಣ ಮುಂಗಡಗಳ ಮೊತ್ತ ₹389.90 ಕೋಟಿಗಳಾಗಿದ್ದವು ಎಂಬುದನ್ನು ಲೆಕ್ಕಪರಿಶೋಧಿತ ವಾರ್ಷಿಕ ಲೆಕ್ಕಪತ್ರಗಳಿಂದ ಗಮನಿಸಲಾಯಿತು. ಕ್ರೋಢೀಕರಣ ಮುಂಗಡವನ್ನು ಇತ್ಯರ್ಥಪಡಿಸದಿರುವುದು ಕೆಆರ್‌ಐಡಿಎಲ್ ಅಂತಿಮ ಚಾಲ್ತಿ ಕಾಮಗಾರಿ ಬಿಲ್‌ಗಳನ್ನು ಇನ್ನೂ ಇತ್ಯರ್ಥಪಡಿಸಿಲ್ಲದಿರುವುದನ್ನು ಸೂಚಿಸುತ್ತದೆ. ಕಾಮಗಾರಿ ವಹಿಸುವ ಸಂಸ್ಥೆಗಳು ಮುಂಗಡವಾಗಿಯೇ ಹಣವನ್ನು ಕೆಆರ್‌ಐಡಿಎಲ್‌ಗೆ ಬಿಡುಗಡೆ ಮಾಡುತ್ತಿರುವುದರಿಂದ ಕ್ರೋಢೀಕರಣ ಮುಂಗಡವನ್ನು ಸ್ವೀಕರಿಸುವ ಅಭ್ಯಾಸವು ಸಮರ್ಥನೀಯವಾಗಿಲ್ಲ. ಇದು ನಿಧಿಗಳ ನಿಷ್ಕ್ರಿಯತೆಗೆ ಕಾರಣವಾಗಿದೆ ಮತ್ತು ಕಂಪನಿಯ ಲೆಕ್ಕಪತ್ರಗಳ ಸಂಪೂರ್ಣತೆಯ ಮೇಲೆ ಪರಿಣಾಮ ಬೀರುತ್ತದೆ.

ರಾಜ್ಯ ಸರ್ಕಾರವು ಲೆಕ್ಕಪರಿಶೋಧನೆಯು ಗಮನಿಸಿದ ಅಂಶವನ್ನು ಒಪ್ಪಿಕೊಂಡು 2021–22ನೇ ಸಾಲಿನಲ್ಲಿ ಕೆಆರ್‌ಐಡಿಎಲ್ ಬಾಕಿ ಉಳಿದಿರುವ ಕ್ರೋಢೀಕರಣ ಮುಂಗಡವನ್ನು ಶೇಕಡಾ 50ರಷ್ಟಕ್ಕೆ ಇಳಿಸಲು ಕ್ರಮ ಕೈಗೊಳ್ಳುತ್ತದೆ ಎಂದು ತಿಳಿಸಿತು. ಇದು ಕ್ರೋಢೀಕರಣ ಮುಂಗಡವನ್ನು ಇತ್ಯರ್ಥಪಡಿಸುವಲ್ಲಿ ಸಾಕಷ್ಟು ಪ್ರಯತ್ನಗಳ ಕೊರತೆಯನ್ನು ಪುನರುಚ್ಚರಿಸುತ್ತದೆ.

### *2.1.2 ಕಾಮಗಾರಿ ವಹಿಸುವ ಸಂಸ್ಥೆಗಳಿಂದ ಪಡೆದ ನಿಧಿಗಳಿಗೆ ವರ್ಕ್ ಕೋಡ್ ನೀಡದಿರುವುದು – ₹303.76 ಕೋಟಿ*

2016–17 ರಿಂದ 2020–21ರ ಅವಧಿಗೆ 24 ಪರೀಕ್ಷಾ–ತನಿಖೆ ನಡೆಸಲಾದ ಉಪ–ವಿಭಾಗಗಳಿಗೆ ಸಂಬಂಧಿಸಿದ ಲೆಕ್ಕಪತ್ರಗಳ ಲೆಕ್ಕಪರಿಶೋಧನಾ ಪರಿಶೀಲನೆಯು ವರ್ಕ್ ಕೋಡ್[2] ನೀಡದೆಯೇ ಉಪ–ವಿಭಾಗಗಳಿಗೆ ಹಣವನ್ನು ಬಿಡುಗಡೆ ಮಾಡಲಾಗಿತ್ತು ಎಂಬುದನ್ನು ತಿಳಿಯಪಡಿಸಿತು. 2020–21ರ ಲೆಕ್ಕಪರಿಶೋಧಿತ ವಾರ್ಷಿಕ ಲೆಕ್ಕಪತ್ರಗಳಿಂದ ಕಂಡುಬಂದಂತೆ, ಕಂಪನಿಯು 2017–18, 2018–19, 2019–20 ಮತ್ತು 2020–21ರ ಅವಧಿಯಲ್ಲಿ ಕಾಮಗಾರಿ ವಹಿಸಿಕೊಡುವ ವಿವಿಧ ಇಲಾಖೆಗಳಿಂದ ಪಡೆದ ಹಣಕ್ಕೆ ಪ್ರತಿಯಾಗಿ ಅನುಕ್ರಮವಾಗಿ ₹24.79 ಕೋಟಿ, ₹35.80 ಕೋಟಿ, ₹143.41 ಕೋಟಿ ಮತ್ತು ₹99.76 ಕೋಟಿ ಹೀಗೆ ಒಟ್ಟಾರೆ ₹303.76 ಕೋಟಿ ಮೊತ್ತದ ಕಾಮಗಾರಿಗಳಿಗೆ ವರ್ಕ್ ಕೋಡ್‌ಗಳನ್ನು ಹಂಚಿಕೆ ಮಾಡಿರಲಿಲ್ಲ. ಪ್ರತಿ ಕಾಮಗಾರಿಗೆ ವರ್ಕ್ ಕೋಡ್ ಹಂಚಿಕೆ ಮಾಡುವುದು ಕಾಮಗಾರಿಯ ಆರಂಭ, ಹಣ ಬಿಡುಗಡೆ ಮತ್ತು ಉಪ–ವಿಭಾಗಗಳ ಮೇಲ್ವಿಚಾರಣೆಗೆ ಪೂರ್ವಾಪೇಕ್ಷಿತವಾಗಿದೆ. ವರ್ಕ್ ಕೋಡ್ ಹಂಚಿಕೆ ಮಾಡದಿರುವುದು ಕಾಮಗಾರಿ ವಹಿಸಿಕೊಡುವ ಇಲಾಖೆಗಳ ನಿಧಿಯನ್ನು ಸರ್ಕಾರದ ಲೆಕ್ಕಗಳ ಹೊರಗೆ ನಿಷ್ಕ್ರಿಯವಾಗಿ ಇಡುವಲ್ಲಿ ಪರಿಣಮಿಸಿತು.

ರಾಜ್ಯ ಸರ್ಕಾರವು ಲೆಕ್ಕಪರಿಶೋಧನೆಯು ಗಮನಿಸಿದ ಅಂಶವನ್ನು ಒಪ್ಪಿಕೊಂಡು ಲಭ್ಯವಿರುವ ಮಾಹಿತಿ/ವಿವರಗಳ ಅನುಸಾರ ವರ್ಕ್ ಕೋಡ್ ಹಂಚಿಕೆ ಮಾಡಲು ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ ಎಂದು ಉತ್ತರಿಸಿತು. ₹303.76 ಕೋಟಿ ಮೌಲ್ಯದ ಕಾಮಗಾರಿಗಳಿಗೆ ವರ್ಕ್ ಕೋಡ್‌ಗಳನ್ನು ಇನ್ನೂ ಹಂಚಿಕೆ ಮಾಡಬೇಕಾಗಿರುವುದು ಕಂಪನಿಯಲ್ಲಿ ಲೆಕ್ಕಪತ್ರಗಳ ಮೇಲಿನ ನಿಯಂತ್ರಣಗಳ ಅನುಪಸ್ಥಿತಿಯನ್ನು ಸೂಚಿಸುತ್ತದೆ.

[2] ಹಣದ ಬಿಡುಗಡೆ, ವಹಿಸಿಕೊಡುವ ಇಲಾಖೆಗಳಿಂದ ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಮಂಜೂರಾತಿಯನ್ನು ಖಚಿತಪಡಿಸಿಕೊಂಡ ನಂತರ ಉಪ–ವಿಭಾಗಗಳಿಂದ ಫಾರ್ಮ್–9ರಲ್ಲಿ ಹಣದ ಕೋರಿಕೆಯ ಆಧಾರದ ಮೇಲೆ ಪ್ರತಿ ನಿರ್ದಿಷ್ಟ ಕಾಮಗಾರಿಗೆ ಕೇಂದ್ರ ಕಛೇರಿಯಿಂದ ನೀಡಲಾಗುವ ವಿಶಿಷ್ಟ ಸರಣಿ ಸಂಖ್ಯೆ.

### 2.1.3 ಅಮಾನತ್ತು ಖಾತೆಗಳಲ್ಲಿ ಇರಿಸಲಾದ ನಿಧಿಗಳು – ₹66.92 ಕೋಟಿ

ಲೆಕ್ಕಪರಿಶೋಧಿತ ವಾರ್ಷಿಕ ಲೆಕ್ಕಪತ್ರಗಳ ಪ್ರಕಾರ, ಕಂಪನಿಯು ಕೆಲವು ಸ್ವೀಕೃತಿಗಳಿಗೆ ಸಂಬಂಧಿಸಿದಂತೆ ಅಂತಿಮ ಲೆಕ್ಕಶೀರ್ಷಿಕೆಯನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗಲಿಲ್ಲ ಮತ್ತು ಅವುಗಳನ್ನು 'ಅಮಾನತ್ತು ಖಾತೆ' ಅಡಿಯಲ್ಲಿ ಇರಿಸಿದೆ. 2016–17 ರಿಂದ 2020–21ರವರೆಗೆ 'ಅಮಾನತ್ತು ಖಾತೆ' ಎಂದು ವರ್ಗೀಕರಿಸಲಾದ ನಿಧಿಗಳು ಏರು ಪ್ರವೃತ್ತಿಯನ್ನು ತೋರಿಸಿದ್ದು, ₹3.95 ಕೋಟಿಯಿಂದ ₹66.92 ಕೋಟಿಗೆ ಏರಿದೆ.

ಅಮಾನತ್ತು ಖಾತೆಗಳಲ್ಲಿ ಇರುವ ಮೊತ್ತವು ಜಿಲ್ಲಾ ಖಜಾನೆಗಳಿಂದ ಪಡೆದ ನಿಧಿಗಳು, ವಿವಿಧ ಕಾಮಗಾರಿ ವಹಿಸುವ ಸಂಸ್ಥೆಗಳಿಂದ ಮತ್ತು ಕೆಆರ್ಐಡಿಎಲ್ ಉಪ–ವಿಭಾಗಗಳಿಂದ ಹಿಂತಿರುಗಿಸಲಾದ ಹಣವನ್ನು ಒಳಗೊಂಡಿರುತ್ತದೆ. ಧೀರ್ಘ ಕಾಲದ ಅವಧಿಗೆ ಅಮಾನತ್ತು ಸ್ವೀಕೃತಿಗಳನ್ನು ಇತ್ಯರ್ಥಪಡಿಸದೇ ಇರುವುದು ಕೆಆರ್ಐಡಿಎಲ್‌ನಿಂದ ದೃಡ ಪ್ರಯತ್ನಗಳ ಕೊರತೆಯನ್ನು ಸೂಚಿಸುತ್ತದೆ ಮತ್ತು ಇದು ಕಂಪನಿಯ ವಾರ್ಷಿಕ ಲೆಕ್ಕಪತ್ರಗಳ ಸಂಪೂರ್ಣತೆಯ ಮೇಲೆ ಪರಿಣಾಮ ಬೀರುತ್ತದೆ.

ರಾಜ್ಯ ಸರ್ಕಾರವು ಲೆಕ್ಕಪರಿಶೋಧನೆಯು ಗಮನಿಸಿದ ಅಂಶವನ್ನು ಒಪ್ಪಿಕೊಂಡು ಕೆಆರ್ಐಡಿಎಲ್‌ನ ಆಂತರಿಕ ಹಣಕಾಸು ನಿಯಂತ್ರಣಗಳನ್ನು ಬಲಪಡಿಸಲಾಗುವುದು ಮತ್ತು ಅಮಾನತ್ತು ಖಾತೆಯನ್ನು ಸಮನ್ವಯಗೊಳಿಸಲಾಗುವುದು ಎಂದು ಹೇಳಿತು.

### 2.1.4 ಕಾಮಗಾರಿ ವಹಿಸುವ ಸಂಸ್ಥೆಗಳಿಂದ ಹಣ ಬಿಡುಗಡೆಗೆ ಮುನ್ನವೇ ಕಾಮಗಾರಿಗಳನ್ನು ಆರಂಭಿಸಿರುವುದು – ₹25.35 ಕೋಟಿ

11 ಉಪವಿಭಾಗಗಳಲ್ಲಿ[3] ₹25.35 ಕೋಟಿ ಅಂದಾಜು ವೆಚ್ಚದ 23 ಕಾಮಗಾರಿಗಳನ್ನು ವಹಿಸಿಕೊಡುವ ಇಲಾಖೆಗಳಿಂದ (01 ರಿಂದ 20 ತಿಂಗಳವರೆಗೆ) ಹಣವನ್ನು ಬಿಡುಗಡೆ ಮಾಡುವ ಮೊದಲೇ ಪ್ರಾರಂಭಿಸಲಾಗಿತ್ತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಹಣದ ಲಭ್ಯತೆಯನ್ನು ಖಾತ್ರಿಪಡಿಸಿಕೊಳ್ಳದೆ ಕಾಮಗಾರಿಗಳನ್ನು ಆರಂಭಿಸಿರುವುದು ಇತರೆ ಕಾಮಗಾರಿಗಳಿಗೆ ಮೀಸಲಿಟ್ಟ ಹಣವನ್ನು ಬಳಸಿದಂತಾಯಿತು.

### 2.1.5 ಕಾಮಗಾರಿ ವಹಿಸುವ ಸಂಸ್ಥೆಗಳು ಬಿಡುಗಡೆ ಮಾಡಿದ ಹಣಕ್ಕಿಂತ ಹೆಚ್ಚಿನ ಖರ್ಚು– ₹54.39 ಕೋಟಿ

ಪರೀಕ್ಷಾ–ತನಿಖೆ ಮಾಡಲಾದ 1,379 ಕಾಮಗಾರಿಗಳ ಪೈಕಿ, ₹586.05 ಕೋಟಿ ಅಂದಾಜು ವೆಚ್ಚದ 439 ಕಾಮಗಾರಿಗಳಿಗೆ (ಶೇಕಡ 32) ಸಂಬಂಧಿಸಿದಂತೆ ಕೆಆರ್ಐಡಿಎಲ್ ಕಾಮಗಾರಿ ವಹಿಸುವ ಸಂಸ್ಥೆಗಳಿಂದ ಕೇವಲ ₹515.16 ಕೋಟಿ ಮಾತ್ರ ಸ್ವೀಕರಿಸಿರುವುದನ್ನು ಗಮನಿಸಲಾಗಿದೆ. ಆದಾಗ್ಯೂ, ಉಪ–ವಿಭಾಗಗಳು ₹569.54 ಕೋಟಿ ವೆಚ್ಚ ಮಾಡಿದ್ದು, ಸ್ವೀಕೃತ ಹಣಕ್ಕಿಂತ ₹54.39 ಕೋಟಿ (ಶೇಕಡ 11) ಹೆಚ್ಚು ವ್ಯಯಿಸಿದಂತಾಗಿದೆ. ಈ ಹೆಚ್ಚುವರಿ ವೆಚ್ಚಕ್ಕೆ ಕಾಮಗಾರಿ ವಹಿಸುವ ಸಂಸ್ಥೆಗಳಿಗೆ ಪರಿಷ್ಕೃತ ಬೇಡಿಕೆಗಳನ್ನು ಸಲ್ಲಿಸಲಾಗಿಲ್ಲ.

---

[3] ಚಿಕ್ಕಬಳ್ಳಾಪುರ, ದಾವಣಗೆರೆ, ಪೂರ್ವ–1 (ಬಿಬಿಎಂಪಿ), ಗದಗ, ಹೂವಿನಹಡಗಲಿ, ಕಲಬುರಗಿ–1, ಕಲಬುರಗಿ–2, ಕೊಪ್ಪಳ (ನೆಲೋಗಿಪುರ), ಮೈಸೂರು, ರಾಮನಗರ ಮತ್ತು ಶಿವಮೊಗ್ಗ.

### *2.1.6 ಅಂದಾಜು ವೆಚ್ಚಕ್ಕಿಂತ ಹೆಚ್ಚಿನ ವೆಚ್ಚ – ₹3.82 ಕೋಟಿ*

ಪರೀಕ್ಷಾ–ತನಿಖೆ ಮಾಡಲಾದ ಆರು ಉಪ–ವಿಭಾಗಗಳಲ್ಲಿ, ₹27.24 ಕೋಟಿ ವೆಚ್ಚದ 15 ಕಾಮಗಾರಿಗಳಿಗೆ ಸಂಬಂಧಿಸಿದಂತೆ ಮಾಡಿದ ವೆಚ್ಚವು ಅಂದಾಜು ವೆಚ್ಚಕ್ಕಿಂತ ₹3.82 ಕೋಟಿ (ಶೇಕಡ 14) ಹೆಚ್ಚಾಗಿದೆ, **ಅನುಬಂಧ–III**ರಲ್ಲಿ ವಿವರಿಸಿದಂತೆ, ಈ ಹೆಚ್ಚಿನ ವೆಚ್ಚಕ್ಕೆ ಕೇಂದ್ರ ಕಛೇರಿಯ ಅನುಮೋದನೆಯನ್ನು ಪಡೆದಿಲ್ಲ ಅಥವಾ ಪರಿಷ್ಕೃತ ಅಂದಾಜುಗಳನ್ನು ತಯಾರಿಸಲಾಗಿಲ್ಲ.

ಮೇಲಿನ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಲೆಕ್ಕ ಇತ್ಯರ್ಥಕ್ಕಾಗಿ ಕೆಆರ್ಐಡಿಎಲ್ ಕಾಮಗಾರಿ ವಹಿಸುವ ಸಂಸ್ಥೆಗಳಿಗೆ ಬೇಡಿಕೆ ಸಲ್ಲಿಸಲು ವಿಫಲವಾಗಿದೆ.

ಮೇಲಿನ ಪದ್ಧತಿಯನ್ನು ಕೈಬಿಡಲಾಗಿದೆ ಮತ್ತು ಸಂಬಂಧಿತ ಕಾಮಗಾರಿ ವಹಿಸುವ ಸಂಸ್ಥೆಗಳಿಂದ ಮುಂಗಡ ಹಣವನ್ನು ಸ್ವೀಕರಿಸಿದ ನಂತರವೇ ಕಾಮಗಾರಿಗಳನ್ನು ಪ್ರಾರಂಭಿಸಲಾಗುತ್ತಿದೆ ಎಂದು ರಾಜ್ಯ ಸರ್ಕಾರ ತಿಳಿಸಿತು. ಮುಂದುವರೆದು, ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ, ತಾಂಡಾ ಅಭಿವೃದ್ಧಿ ನಿಗಮ ಮುಂತಾದ ಕಾಮಗಾರಿ ವಹಿಸುವ ಸಂಸ್ಥೆಗಳು ಅಂದಾಜು ವೆಚ್ಚದ ಶೇಕಡ 80ರಷ್ಟು ಹಣವನ್ನು ಮಾತ್ರ ಬಿಡುಗಡೆ ಮಾಡುತ್ತಿದ್ದು, ಹಣದ ನಿರೀಕ್ಷೆಯಲ್ಲಿ ಕೆಆರ್ಐಡಿಎಲ್ ಬಾಕಿ ವೆಚ್ಚವನ್ನು ಭರಿಸುತ್ತಿದೆ ಎಂದು ತಿಳಿಸಿತು. ಈ ನ್ಯೂನತೆಗಳನ್ನು ಸರಿಪಡಿಸಲು ಕಂಪನಿಯು ವಿಭಾಗ/ಉಪ–ವಿಭಾಗಗಳ ಮಟ್ಟದಲ್ಲಿ ಮಾರ್ಗಪಲ್ಲಟ/ಹೆಚ್ಚುವರಿ ವೆಚ್ಚವನ್ನು ತಪ್ಪಿಸಲು ಪರಿಣಾಮಕಾರಿ ಹಣಕಾಸು ನಿರ್ವಹಣೆಗಾಗಿ ಒಂದು ಪೂರ್ವ–ಲೆಕ್ಕಪರಿಶೋಧನೆ ವ್ಯವಸ್ಥೆಯನ್ನು ಪರಿಚಯಿಸಿದೆ ಎಂದೂ ಸಹ ತಿಳಿಸಿತು. ಆದರೆ, ಉಪ–ವಿಭಾಗಗಳಿಗೆ ಕಾಮಗಾರಿಗಳನ್ನು ಪೂರ್ಣಗೊಳಿಸಲು ವ್ಯತ್ಯಾಸದ ಹಣದ ಅಗತ್ಯತೆ ಇದೆ ಎಂಬುದು ನೈಜ ಸಂಗತಿಯಾಗಿದೆ.

## 2.2 ರಾಯಧನ ವಸೂಲಾತಿ ಆಗದಿರುವುದು/ಕಡಿಮೆ ವಸೂಲಾತಿ ಆಗಿರುವುದು – ₹4.81 ಕೋಟಿ

ಕರ್ನಾಟಕ ಸರ್ಕಾರದ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಆದೇಶದಂತೆ, ಕಾಮಗಾರಿಗಳ ಅನುಷ್ಠಾನದಲ್ಲಿ ಬಳಸುವ ಮರಳು, ಜೆಲ್ಲಿ, ಕಲ್ಲು, ಮಣ್ಣು ಮುಂತಾದ ವಸ್ತುಗಳ ಮೇಲೆ ಕಾಲಕಾಲಕ್ಕೆ ನಿಗದಿಪಡಿಸಿದ ದರಗಳಲ್ಲಿ ರಾಯಧನ ಪಾವತಿಯಾಗಬೇಕು. ರಾಯಧನವನ್ನು ಮೊದಲೇ ಪಾವತಿಸಿ ಮಾನ್ಯತೆ ಹೊಂದಿದ ಖನಿಜ ರವಾನೆ ಪರವಾನಗಿ ಪತ್ರ ಲಗತ್ತಿಸಿದ ಸಂದರ್ಭಗಳಲ್ಲಿ ಇಲಾಖೆಯು ಆ ಸಂಸ್ಥೆಗಳ ಕ್ಲೇಮು/ಹಕ್ಕುಗಳನ್ನು ಅನುಮತಿಸಬೇಕು.

ರಾಯಧನವನ್ನು ಒಳಗೊಂಡಂತೆ ಲೋಕೋಪಯೋಗಿ ಇಲಾಖೆ ದರಪಟ್ಟಿ/ಪಿಆರ್ಇಡಿ ದರಪಟ್ಟಿಯಲ್ಲಿ ಒದಗಿಸಲಾದ ಐಟಂ ದರದ ಆಧಾರದಲ್ಲಿ ಉಪ–ವಿಭಾಗಗಳು 2016–17ರಿಂದ 2020–21ರ ಅವಧಿಯಲ್ಲಿ ವಿವಿಧ ರಸ್ತೆಗಳು ಮತ್ತು ಕಟ್ಟಡಗಳ ನಿರ್ಮಾಣ ಕಾಮಗಾರಿಗಳನ್ನು ಕಾರ್ಯಗತಗೊಳಿಸಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಗುಂಪು ನಾಯಕರುಗಳಿಗೆ[4] ಕಾಮಗಾರಿ ಬಿಲ್ಲುಗಳ ಮೂಲಕ ಪಾವತಿಗಳನ್ನು ಮಾಡುವಾಗ ರಾಯಧನವನ್ನು ಕ್ರಮಬದ್ಧವಾಗಿ ಕಡಿತಗೊಳಿಸಬೇಕು ಮತ್ತು ಅಂತಹ ಆದಾಯವನ್ನು ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಸಂಬಂಧಿತ ಸ್ವೀಕೃತಿ ಲೆಕ್ಕಶೀರ್ಷಿಕೆಗೆ ಜಮೆ ಮಾಡಬೇಕು. ಗುಂಪು ನಾಯಕರುಗಳಿಗೆ ಮಾಡಿದ ಪಾವತಿಗಳಿಂದ **ಅನುಬಂಧ–IV**ರಲ್ಲಿ ವಿವರಿಸಿರುವಂತೆ, ₹4.82 ಕೋಟಿ ಮೊತ್ತದ ಅಂತಹ 287 ಕಾಮಗಾರಿಗಳಲ್ಲಿ ರಾಯಧನವನ್ನು ಕಡಿತಗೊಳಿಸಲಾಗಿಲ್ಲ ಎಂಬುದು ತಿಳಿದುಬಂದಿತು.

[4] 20 ರಿಂದ 25 ಕೂಲಿಕಾರ್ಮಿಕರ ಗುಂಪಿನಲ್ಲಿ ಓರ್ವನನ್ನು ಗುಂಪಿನ ನಾಯಕ (ಗ್ರೂಪ್ ಲೀಡರ್) ಎನ್ನಲಾಗುತ್ತದೆ.

ಈ ಬಗ್ಗೆ, ಕರ್ನಾಟಕ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ 539/2006ರ (M/s ಕರ್ನಾಟಕ ಕ್ರಷರ್ಸ್ Vs ಕರ್ನಾಟಕ ರಾಜ್ಯ) ಅನುಸಾರ ಕ್ವಾರಿ ಗುತ್ತಿಗೆದಾರರು, ಖಾಸಗಿ ಕ್ವಾರಿ ಮಾಲೀಕರು ಮುಂತಾದ ಮುಕ್ತ ಮಾರುಕಟ್ಟೆಯಲ್ಲಿ ಖರೀದಿಸಿದ ವಸ್ತುಗಳನ್ನು ಗುತ್ತಿಗೆದಾರರು ಬಳಸಿದಾಗ ರಾಯಧನ ಶುಲ್ಕವನ್ನು ಪಾವತಿಸಲು ಗುತ್ತಿಗೆದಾರರ ಮೇಲೆ ಯಾವುದೇ ಹೊಣೆಗಾರಿಕೆ ಇರುವುದಿಲ್ಲ ಎಂದು ಉತ್ತರಿಸಲಾಗಿದೆ.

ಕೆಆರ್ಐಡಿಎಲ್‌ನ ಕ್ಲೇಮ್‌ಗಳಿಗೆ ಸಂಬಂಧಿಸಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರಾಯಧನವನ್ನು ಕಡಿತಗೊಳಿಸಿರುವುದರಿಂದ ರಾಜ್ಯ ಸರ್ಕಾರದ ಈ ಉತ್ತರವು ಸಮರ್ಥನೀಯವಾಗಿಲ್ಲ. ಅದೇ ರೀತಿಯಾಗಿ, ಗುಂಪು ನಾಯಕರುಗಳ ಕಾಮಗಾರಿ ಬಿಲ್ಲುಗಳಲ್ಲಿ ಕೆಆರ್ಐಡಿಎಲ್ ರಾಯಧನ ಕಡಿತ ಮಾಡಿರುವುದಿಲ್ಲ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹೊರತು ಪಡಿಸಿದ ಕಾಮಗಾರಿಗಳಲ್ಲಿ ಗುಂಪು ನಾಯಕರುಗಳು ಮಾನ್ಯತೆ ಹೊಂದಿದ ಖನಿಜ ರವಾನೆ ಪರವಾನಗಿ ಪತ್ರ ಲಗತ್ತಿಸಿದ್ದಾರೆಯೇ ಎಂಬುದನ್ನು ಖಚಿತ ಪಡಿಸಿಕೊಳ್ಳುವಲ್ಲಿ ಕೆಆರ್ಐಡಿಎಲ್ ವಿಫಲವಾಗಿದೆ.

## 2.3 ಯೋಜನಾ ನಿಧಿಗಳ ಮೇಲೆ ಗಳಿಸಿದ ಬಡ್ಡಿಯನ್ನು ಜಮಾ ಮಾಡದೆ ಇರುವುದು – ₹238.89 ಕೋಟಿ

ಹಣಕಾಸು ಇಲಾಖೆಯು ದಿನಾಂಕ 01.03.2018ರ ಸುತ್ತೋಲೆಯಲ್ಲಿ ಸರ್ಕಾರಿ ನಿಧಿಯ ಮೇಲೆ ಗಳಿಸಿದ ಬಡ್ಡಿಯನ್ನು ಪ್ರತಿ ಹಣಕಾಸು ವರ್ಷದ ಅಂತ್ಯದಲ್ಲಿ ಬಡ್ಡಿ ಸ್ವೀಕೃತಿ ಲೆಕ್ಕಶೀರ್ಷಿಕೆ '0049'ಗೆ ಜಮೆ ಮಾಡಲು ನಿರ್ದೇಶಿಸಿದೆ. ಕಾಮಗಾರಿಗಳನ್ನು ಕಾರ್ಯಗತಗೊಳಿಸಲು ಕಾಮಗಾರಿ ವಹಿಸುವ ಸಂಸ್ಥೆಗಳು ಬಿಡುಗಡೆ ಮಾಡುವ ಸರ್ಕಾರದ ನಿಧಿಯ ಬಳಕೆಯಾಗದ ಹಣವನ್ನು ಕೆಆರ್ಐಡಿಎಲ್ ಫ್ಲೆಕ್ಸಿ ಠೇವಣಿಗಳಲ್ಲಿ ಹೂಡಿಕೆ ಮಾಡುತ್ತಿದೆ. 2018–21ರ ಅವಧಿಯಲ್ಲಿ ಅಂತಹ ಫ್ಲೆಕ್ಸಿ ಠೇವಣಿಗಳ ಮೇಲೆ ಗಳಿಸಿದ ₹238.89 ಕೋಟಿ ಬಡ್ಡಿಯನ್ನು ಸರ್ಕಾರಿ ಖಾತೆಗೆ ಜಮೆ ಮಾಡಲಾಗಿಲ್ಲ.

***ಶಿಫಾರಸು 1:*** *ರಾಜ್ಯ ಸರ್ಕಾರವು ಕಾಮಗಾರಿ ವಹಿಸುವ ಸಂಸ್ಥೆಗಳು ಮತ್ತು ಕೆಆರ್ಐಡಿಎಲ್ ನಡುವೆ ನಿಧಿಗಳ ನಿಯತಕಾಲಿಕ ಸಮನ್ವಯವನ್ನು ಖಚಿತಪಡಿಸಿಕೊಳ್ಳಬೇಕು. ಕಾಮಗಾರಿಗಳ ಆರಂಭಿಸುವಲ್ಲಿನ ವಿಳಂಬಕ್ಕೆ ಹೊಣೆಗಾರಿಕೆಯನ್ನು ನಿಗದಿಪಡಿಸಬೇಕು.*